**ಓಎಸ್ ನಂಃ 87/2016**
**ಪಿಡಬ್ಲೂಃ 4**

**ಸಾಕ್ಷಿಗೆ ದಿನಾಂಕ 27-11-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್.ಪಿ.ಎಸ್. ವಕೀಲರಿಂದ

1. ನನ್ನ ತಂದೆಗೆ 3 ಜನ ಮಕ್ಕಳು ಇರುತ್ತಾರೆ. ನಾನು ಎಲ್ಲಕ್ಕಿಂತ ಕಿರಿಯ ಮಗಳಾಗಿರುತ್ತೇನೆ. ನನ್ನ ಮದುವೆಯನ್ನು ಬೆಣ್ಣೂರು ಗ್ರಾಮಕ್ಕೆ ಮಾಡಿಕೊಡಲಾಗಿತ್ತು. ನೀವು ಮದುವೆ ಆದ ನಂತರ ನಿಮ್ಮ ಗಂಡನೊಂದಿಗೆ ಬೆಣ್ಣೂರು ಗ್ರಾಮದಲ್ಲಿ ವಾಸವಾಗಿದ್ದಿರಿ ಎಂದರೆ ಸರಿಯಲ್ಲ. ನೀವು ಬೆಣ್ಣೂರು ಗ್ರಾಮದಲ್ಲಿ ವಾಸವಾಗಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಾವೆ ಕುರಿತು ನಿಮ್ಮ ಸಹೋದರರಿಗೆ ಮಾಹಿತಿ ಇದೆಯೋ ಇಲ್ಲವೋ ಎಂದರೆ ಸಾಕ್ಷಿ ಈ ದಾವೆ ಬಗ್ಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಈ ದಾವೆಯನ್ನು ನಮ್ಮ ತಾಯಿ ಹಾಕಿದ ಕಾರಣ ಮಾಹಿತಿ ಇದೆ ಎಂದು ನುಡಿಯುತ್ತಾರೆ. ನಿಮ್ಮ ಸಹೋದರರು ನಿಮಗೆ ಬಂದ ಆಸ್ತಿಯನ್ನು ಈಗಾಗಲೇ ಮಾರಾಟ ಮಾಡಿದ್ದು ಅದನ್ನು ಮುಚ್ಚಿಡಲು ಈಗ ನ್ಯಾಯಾಲಯಕ್ಕೆ ಬರುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಸುಮಾರು 2 ½ ಎಕ್ರೆ ಜಾಗ ಮಾಡಬೂಳು ಗ್ರಾಮದಲ್ಲಿದೆ. ನೀವು ಹೇಳುವ ಜಮೀನು ಸರಕಾರ ನೀಡಿದ ಜಮೀನು ಎಂದರೆ ಸರಿ. ನಾನು ಹೇಳುವ ಜಮೀನಿನ ಅಕ್ಕಪಕ್ಕದಲ್ಲಿ ಪ್ರತಿವಾದಿಗೆ ಸೇರಿದ ಜಮೀನು ಇಲ್ಲ ಎಂದರೆ ಸರಿ. ಸದರಿ ಜಮೀನಿನ ಅಕ್ಕಪಕ್ಕದಲ್ಲಿ ಡಾ.ಪ್ರಭುರಾಜ್ ಕಾಂತ ಮತ್ತು ಗುರುಸಿದ್ದಪ್ಪ ಅವರ ಜಮೀನು ಇದೆ ಎಂದರೆ ಸರಿ. ನೀವು ಸದರಿ ಜಮೀನನ್ನು ಡಾ.ಪ್ರಭುರಾಜ್ ಕಾಂತ ಮತ್ತು ಗುರುಸಿದ್ದಪ್ಪ ರವರಿಗೆ ಮಾರಾಟ ಮಾಡಿದ್ದೀರಿ ಎಂದರೆ ಸಾಕ್ಷಿ ಗುರುಸಿದ್ದಪ್ಪರವರಿಗೆ ಮಾರಾಟ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಮ್ಮ ಊರಿನವರಲ್ಲ. ಅವರು ಯಾವ ಊರಿನವರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಮ್ಮ ಜಮೀನಿನಲ್ಲಿ ಅಕ್ರಮವಾಗಿ ಊಳುತ್ತಿದ್ದ ಕಾರಣ ನನ್ನ ತಾಯಿ ಅವರ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ.

2. ದಾವ ಸರ್ವೆ ನಂಬರ್ 30ರಲ್ಲಿ ಪ್ರತಿವಾದಿಗೆ ಸೇರಿದ 2 ಎಕ್ರೆ 33 ಗುಂಟೆ ಜಾಗ ಇದೆ ಎಂದರೆ ನನಗೆ ಗೊತ್ತಿಲ್ಲ. ನೀವು ಸಲ್ಲಿಸಿದ ದಾಖಲೆಗಳಲ್ಲಿ ದಾವ ಸರ್ವೆ ನಂಬರ್ ನಲ್ಲಿ ಪ್ರತಿವಾದಿಗೆ ಸೇರಿದ 2 ಎಕ್ರೆ 33 ಗುಂಟೆ ಜಾಗದ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ.

ಸದರಿ 2 ಎಕ್ರೆ 33 ಗುಂಟೆ ಜಾಗದಲ್ಲಿ ಪ್ರತಿವಾದಿ ಬೇಸಾಯ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ನಿಪಿ-20ರಿಂದ 25 ದಾಖಲೆಗಳನ್ನು ನಮ್ಮ ವಕೀಲರು ತಿಳಿಸಿದಂತೆ ನಾನು ಸರಕಾರಿ ಕಛೇರಿಯಿಂದ ತಂದಿರುತ್ತೇನೆ. ದಾವ ಆಸ್ತಿಯನ್ನು ನೀವು ಈಗಾಗಲೇ ಮಾರಾಟ ಮಾಡಿ ಈಗ ಪ್ರತಿವಾದಿಯವರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ- 20 ರಿಂದ 25 ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ದಾವ ಆಸ್ತಿಯಲ್ಲಿ ಬೇಸಾಯ ಮಾಡಲ್ಲ ಎಂದರೆ ಸರಿ. ನೀವು ದಾವ ಆಸ್ತಿಯ ಕಬ್ಜ ಹೊಂದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

**ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.**